**2ನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು ಮತ್ತು ಎಸಿಜೆಎಂ ನ್ಯಾಯಾಲಯ, ಲಘು ವ್ಯವಹಾರಗಳ ನ್ಯಾಯಾಲಯ, ಬೆಂಗಳೂರು.**

| | | |
|---|---|---|
| ಹೆಸರು | : | ಮಂಜುಳಾ |
| ಗಂಡನ ಹೆಸರು | : | ಕೃಷ್ಣಮೂರ್ತಿ ಕೆ. ಆರ್. |
| ವರ್ಷ | : | 37ವರ್ಷ |
| ಉದ್ಯೋಗ | : | ಟೈಲರಿಂಗ್ |
| ಸ್ಥಳ | : | ಕುವೆಂಪುನಗರ, ಮಾಗಡಿ ರಸ್ತೆ, ತಾವರೆಕೆರೆ. |

**ಸಾಕ್ಷಿಯನ್ನು ದಿನಾಂಕ 12.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ ಃ- ಆರೋಪಿ ಪರ ವಕೀಲರಿಂದಃ-**

ಪಿರ್ಯಾದಿಯು ನನಗೆ ದಿನಾಂಕಃ 31.12.2023ರಲ್ಲಿ ಪರಿಚಯವಾಗಿರುತ್ತಾರೆ. ಆಗಾಗ ನಾನು ಪಿರ್ಯಾದಿಯ ಬಳಿ ಹಣವನ್ನು ಪಡೆಯುವುದು ಮತ್ತು ಹಿಂತಿರುಗಿಸುವುದು ಮಾಡುತ್ತಿದ್ದೆ. ಅವಶ್ಯಕತೆ ಇದ್ದರೆ ಅವರ ಬಳಿ ರೂ.10,000/- ಮತ್ತು ರೂ.20,000/- ಪಡೆಯುತ್ತಿದ್ದೆ. ನನ್ನ ಬಳಿ ಒಂದು ಲಕ್ಷ ಹಣ ಅವಶ್ಯಕತೆ ಇತ್ತು, ಆ ಕಾರಣ ಅವರು ಭದ್ರತೆಗಾಗಿ ಏನಾದರೂ ಕೊಡು ಎಂದು ಕೇಳಿದರು. ನಾನು ಚೆಕ್ ಅನ್ನು ಕೊಟ್ಟೆ. ಒಂದು ಲಕ್ಷ ಹಣವನ್ನು ನಾನು ಪೋನ್ ಪೇ ಮುಖಾಂತರ ಹಿಂದಿರುಗಿಸಿರುತ್ತೇನೆ. ಹಣವನ್ನು ಹಿಂತಿರುಗಿಸಿದ ನಂತರ ನಾನು ಕೊಟ್ಟಿರುವ ಚೆಕ್ ಅನ್ನು ವಾಪಸ್ಸು ಕೇಳಿದೆ. ಅವರು ಎಲ್ಲೋ ಇಟ್ಟಿದ್ದೇನೆ ಕೊಡುತ್ತೇನೆ ಎಂದು ಹೇಳಿದರು. ತದನಂತರ ಚೆಕ್ ಅನ್ನು ದುರುಪಯೋಗಪಡಿಸಿಕೊಂಡು ಈ ಪ್ರಕರಣ ಹಾಕಿಕೊಂಡಿರುತ್ತಾರೆ. ನಾನು ಕೊಟ್ಟಿರುವಂತಹ ಚೆಕ್ ಅನ್ನು ಪಿರ್ಯಾದಿ ಒಂದು, ಅವರ ಹೆಂಡತಿ ಒಂದು ಪ್ರಕರಣ ಹಾಕಿಕೊಂಡಿರುತ್ತಾರೆ.

**ಪಾಟೀಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು**
**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ. ಇ)**

**2ನೇ ಹೆಚ್ಚುವರಿ ಲಘು ವ್ಯವಹಾರಗಳ**

**ನ್ಯಾಯಾಧೀಶರು, ಬೆಂಗಳೂರು.**